# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 564 |
| ಸದಸ್ಯರ ಹೆಸರು | : | ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸುವವರು | : | ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖಾ ಸಚಿವರು. |
| ಉತ್ತರಿಸಬೇಕಾದ ದಿನಾಂಕ | : | 11-12-2020 |

| ಕ್ರಂ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿಕಳೆದ 03 ವರ್ಷಗಳಲ್ಲಿ ಸಂಭವಿಸಿರುವ ಬಾಲ್ಯವಿವಾಹ ಸಂಖ್ಯೆ ಎಷ್ಟು; (ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು) | ಅನುಬಂಧ-1ರಲ್ಲಿ ಲಗತ್ತಿಸಿದೆ. |
| ಆ | ನಿಗದಿಪಡಿಸಿರುವ ಸಮರ್ಥನೀಯ ಗುರಿಗಳನ್ನು (Sustainable Goloals) ತಲುಪಲು ರಾಜ್ಯ ಸರ್ಕಾರ ಬಾಲ್ಯವಿವಾಹ ಮತ್ತು ಬಲವಂತದ ವಿವಾಹಗಳನ್ನು ತಡೆಗಟ್ಟಲು ನಿರ್ವಹಿಸಿರುವ ಕ್ರಮಗಳೇನು; (ಸಂಪೂರ್ಣ ವಿವರ ನೀಡುವುದು) | ಅನುಬಂಧ-2ರಲ್ಲಿ ಲಗತ್ತಿಸಿದೆ. |
| ಇ | ಇತ್ತೀಚಿನ ಕೊರೋನ ಸೋಂಕು ಪಿಡುಗುವಿನಿಂದ ಬಾಲ್ಯವಿವಾಹಗಳಲ್ಲಿ ಗಣನೀಯ ಏರಿಕೆ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಬಾಲ್ಯವಿವಾಹಗಳನ್ನು ತಡೆಗಟ್ಟಲು ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು; | ಅನುಬಂಧ-3ರಲ್ಲಿ ಲಗತ್ತಿಸಿದೆ. |
| ಈ | ಬಹುತೇಕ ಬಾಲ್ಯವಿವಾಹ ಪ್ರಕರಣಗಳಲ್ಲಿ ತಾಯಿ-ತಂದೆಯರ ಆರ್ಥಿಕ ದುರ್ಬಲ ಮತ್ತು ಬಾಲಕಿಯರು ತಂದೆ-ತಾಯಿಗಳಿಗೆ ತಾವು ಭಾರವಾಗಬಾರದೆಂಬ ಭಾವನೆಗಳಿಂದ ಕೂಡಿದೆ ಎನ್ನುವ ಅಂಶಗಳು ಸರ್ಕಾರದ ಅರಿವಿಗೆ ಬಂದಿದೆಯೇ; | ಇಂತಹ ಯಾವುದೇ ಪ್ರಕರಣ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. |
| ಉ | ರಾಜ್ಯದಲ್ಲಿ ಬಾಲ್ಯವಿವಾಹಗಳು, ಯಾವ ವರ್ಗ/ಸಮುದಾಯಗಳಲ್ಲಿ ಸಾಂಪ್ರದಾಯಿಕತವಾಗಿ ಉಳಿದಿದೆ ಎಂದು ಗಣತಿ/ಸಮೀಕ್ಷೆಯಿಂದ ಸರ್ಕಾರದ ಗಮನಕ್ಕೆ ಬಂದಿದೆಯೇ? (ವಿವರ ನೀಡುವುದು) | ರಾಜ್ಯದಲ್ಲಿ ಬಾಲ್ಯವಿವಾಹಗಳು, ಯಾವ ವರ್ಗ/ಸಮುದಾಯಗಳಲ್ಲಿ ಸಾಂಪ್ರದಾಯಿಕವಾಗಿ ಉಳಿದಿದೆ ಎಂಬುದರ ಬಗ್ಗೆ ಗಣತಿ ಸಮೀಕ್ಷೆ ನಡೆಸಿರುವುದಿಲ್ಲ. ಆದಾಗ್ಯೂ ಕೆಲವು ಸಮುದಾಯಗಳಲ್ಲಿ ಇರುವ ಪದ್ಧತಿಯಂತೆ ಬಾಲ್ಯವಿವಾಹಗಳು ನಡೆಯದಂತೆ ಕ್ರಮ ವಹಿಸಿದ್ದು,ಬಾಲ್ಯವಿವಾಹಗಳ ದುಷ್ಪರಿಣಾಮಗಳ ಬಗ್ಗೆ ಅರಿವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. |

(ಶಶಿಕಲಾ ಅಣ್ಣಾಸಾಹೇಬ್ ಜೊಲ್ಲೆ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ
ಇಲಾಖಾ ಸಚಿವರು.

ಸಂಖ್ಯೆ : ಮಮಇ 127 ಮಮಅ 2020

-564

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮ ನಿರ್ದೇಶನ ಹೊಂದಿದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:564ಕ್ಕೆ ಅನುಬಂಧ-1**

| ರಾಜ್ಯದಲ್ಲಿಕಳೆದ 03 ವರ್ಷಗಳಲ್ಲಿ ಸಂಭವಿಸಿರುವ ಬಾಲ್ಯವಿವಾಹ ಸಂಖ್ಯೆ ಎಷ್ಟು; (ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು) | | | | |
|---|---|---|---|---|
| ಕ್ರಂ.ಸಂ | ಜಿಲ್ಲೆಯ ಹೆಸರು | 2017-18 | 2018-19 | 2019-20 |
| 1 | 2 | 3 | 4 | 5 |
| 1 | ಬಾಗಲಕೋಟೆ | 0 | 7 | 5 |
| 2 | ಬೆಂಗಳೂರು(ಗ್ರಾ) | 1 | 1 | 0 |
| 3 | ಬೆಂಗಳೂರು(ನ) | 1 | 5 | 3 |
| 4 | ಬೆಳಗಾವಿ | 4 | 12 | 12 |
| 5 | ಬಳ್ಳಾರಿ | 1 | 2 | 3 |
| 6 | ಬೀದರ್ | 0 | 5 | 0 |
| 7 | ವಿಜಯಪುರ | 0 | 1 | 0 |
| 8 | ಚಾಮರಾಜನಗರ | 1 | 0 | 3 |
| 9 | ಚಿಕ್ಕಬಳ್ಳಾಪುರ | 9 | 7 | 10 |
| 10 | ಚಿಕ್ಕಮಗಳೂರು | 2 | 2 | 5 |
| 11 | ಚಿತ್ರದುರ್ಗ | 4 | 3 | 2 |
| 12 | ದಕ್ಷಿಣ ಕನ್ನಡ | 3 | 2 | 4 |
| 13 | ದಾವಣಗೆರೆ | 6 | 2 | 2 |
| 14 | ಧಾರವಾಡ | 2 | 0 | 2 |
| 15 | ಗದಗ | 0 | 0 | 1 |
| 16 | ಕಲಬುರಗಿ | 4 | 7 | 12 |
| 17 | ಹಾಸನ | 0 | 2 | 0 |
| 18 | ಹಾವೇರಿ | 0 | 1 | 0 |
| 19 | ಕೊಡಗು | 0 | 2 | 1 |
| 20 | ಕೋಲಾರ | 0 | 0 | 1 |
| 21 | ಕೊಪ್ಪಳ | 5 | 6 | 5 |
| 22 | ಮಂಡ್ಯ | 21 | 18 | 29 |
| 23 | ಮೈಸೂರು | 11 | 4 | 7 |
| 24 | ರಾಯಚೂರು | 0 | 1 | 3 |
| 25 | ರಾಮನಗರ | 13 | 7 | 31 |
| 26 | ಶಿವಮೊಗ್ಗ | 8 | 13 | 10 |
| 27 | ತುಮಕೂರು | 5 | 5 | 4 |
| 28 | ಉಡುಪಿ | 0 | 1 | 1 |
| 29 | ಉತ್ತರ ಕನ್ನಡ | 0 | 2 | 0 |
| 30 | ಯಾದಗಿರಿ | 1 | 1 | 0 |
| **ಒಟ್ಟು** | | **102** | **119** | **156** |

-- 564

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮ ನಿರ್ದೇಶನ ಹೊಂದಿದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:564ಕ್ಕೆ ಅನುಬಂಧ-2**

ನಿಗದಿಪಡಿಸಿರುವ ಸಮರ್ಥನೀಯ ಗುರಿಗಳನ್ನು (Sustainable Goloals) ತಲುಪಲು ರಾಜ್ಯ ಸರ್ಕಾರ ಬಾಲ್ಯವಿವಾಹ ಮತ್ತು ಬಲವಂತದ ವಿವಾಹಗಳನ್ನು ತಡೆಗಟ್ಟಲು ನಿರ್ವಹಿಸಿರುವ ಕ್ರಮಗಳೇನು; (ಸಂಪೂರ್ಣ ವಿವರ ನೀಡುವುದು)

- ಬಾಲ್ಯವಿವಾಹ ನಿಷೇಧ ಕಾಯ್ದೆ-2006 ನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಸಂಬಂಧ ಸರ್ಕಾರದ ಆದೇಶ ಸಂಖ್ಯೆ: ಮಮಇ 501 ಎಸ್ .ಜೆ .ಡಿ 2011 ದಿನಾಂಕ:16.11.2011ರಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ನಿರ್ದೇಶನಾಲಯದಲ್ಲಿ ಉಸ್ತುವಾರಿ ಕೋಶವನ್ನು ಸ್ಥಾಪಿಸಲಾಗಿದೆ.
- ಬಾಲ್ಯವಿವಾಹ ನಿಷೇಧ ಅಧಿನಿಯಮ-2006ಕ್ಕೆ ತಿದ್ದುಪಡಿ ತರಲಾಗಿದ್ದು, ಬಾಲ್ಯವಿವಾಹ ನಿಷೇಧ ಕರ್ನಾಟಕ ತಿದ್ದುಪಡಿ ಕಾಯ್ದೆ-2016 03-03-2018ರಿಂದ ಜಾರಿಗೆ ಬಂದಿರುತ್ತದೆ.
- ದಾವಣಗೆರೆ, ಚಿತ್ರದುರ್ಗ, ಧಾರವಾಡ, ಗದಗ, ತುಮಕೂರು ಕೊಪ್ಪಳ, ರಾಯಚೂರು, ಯಾದಗಿರಿ, ಕಲಬುರಗಿ, ಬಾಗಲಕೋಟೆ ಜಿಲ್ಲೆಗಳ 707 ಕೆ.ಎಸ್.ಆರ್.ಟಿ.ಸಿ. ಬಸ್ಸುಗಳಲ್ಲಿ ಬಾಲ್ಯವಿವಾಹ ನಿಷೇಧ ಕುರಿತು 03 ತಿಂಗಳ ಅವಧಿಗೆ ಜಾಹೀರಾತು ಪ್ರದರ್ಶಿಸಲಾಗಿದೆ.
- ಯುನೈಟೆಡ್ ಸಿಸ್ಟರಸ್ ಫೌಂಡೇಶನ್, ಮುಂಬೈ ಇವರು ದಿನಾಂಕ:18-02-2018 ರಂದು ಬೆಂಗಳೂರಿನ ಕಂಠೀರವ ಸ್ಟೇಡಿಯಂನಲ್ಲಿ ಆಯೋಜಿಸಿದ್ದ ಪಿಂಕಥಾನ್-2018 Indian's Biggest Women's Run ಕಾರ್ಯಕ್ರಮದಲ್ಲಿ ಬಾಲ್ಯವಿವಾಹ ನಿಷೇಧದ ಬಗ್ಗೆ ಮತ್ತು ಇಲಾಖೆಯ ಇತರೆ ಕಾರ್ಯಕ್ರಮಗಳ ಬಗ್ಗೆ ಅರಿವು ಮೂಡಿಸಲಾಗಿದೆ.
- ಬಾಲ್ಯವಿವಾಹ ನಿಷೇಧ ಕುರಿತಂತೆ ಗೋಡೆ ಬರಹ, ಪೋಸ್ಟರ್ ಮತ್ತು ಸಾಮಾನ್ಯವಾಗಿ ಕೇಳಲಾಗುತ್ತಿರುವ ಪ್ರಶ್ನೆಗಳ ಪುಸ್ತಕ ತಯಾರಿಸಿ ಮುದ್ರಿಸಿ ಜಿಲ್ಲೆಗಳಿಗೆ ವಿತರಿಸಲಾಗಿದೆ.
- ಸಾಮೂಹಿಕ ವಿವಾಹ ಆಯೋಜಕರು, ಪೂಜಾರಿಗಳು, ಕಲ್ಯಾಣಮಂಟಪ ವ್ಯವಸ್ಥಾಪಕರು, ಧಾರ್ಮಿಕ ಮುಖಂಡರು, ಬಾಲ್ಯವಿವಾ ನಿಷೇಧಾಧಿಕಾರಿಗಳು, ನ್ಯಾಯಾಧೀಶರು, ಹಾಸ್ಟೆಲ್ ವಾರ್ಡನ್ ಗಳು ಪ್ರೌಢಶಾಲಾ, ಮುಖ್ಯೋಪಾದ್ಯಾಯರು, ಪದವಿ ಪೂರ್ವ ಕಾಲೇಜುಗಳ ಕಾರ್ಯಕರ್ತೆಯರು, ಚುನಾಯಿತ ಪ್ರತಿನಿಧಿಗಳಿಗೆ ಬಾಲ್ಯವಿವಾಹ ನಿಷೇಧ (ಕರ್ನಾಟಕ ತಿದ್ದುಪಡಿ) ಕಾಯ್ದೆ-2016 ಮತ್ತು ಬಾಲ್ಯವಿವಾಹ ನಿಷೇಧ ನಿಯಮಾವಳಿಗಳು, 2014ರ ಕುರಿತು ಅರಿವು ಮೂಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.
- ಆಕಾಶವಾಣಿ ಕೇಂದ್ರದಿಂದ ರೇಡಿಯೋ ಜಿಂಗಲ್ಸ್ ಮತ್ತು ದೂರದರ್ಶನ ಕೇಂದ್ರದ ಮುಖಾಂತರ ಸ್ಪಾಟ್ ಗಳನ್ನು ಪ್ರಸಾರ ಮಾಡಲಾಗಿದೆ ಹಾಗೂ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.
- ಆಕಾಶವಾಣಿಯಲ್ಲಿ **"ಕನಸು ತೋರಣ ಕಟ್ಟಲಿ"** ಎಂಬ ಸರಣಿ ಕಾರ್ಯಕ್ರಮ ಮತ್ತು ಫೋನ್ ಇನ್ ಕಾರ್ಯಕ್ರಮಗಳನ್ನು ಪ್ರಸಾರ ಮಾಡಲಾಗಿದೆ.
- ಬಾಲ್ಯವಿವಾಹ ನಿಷೇಧ ಕುರಿತು ರಾಜ್ಯ, ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಸಮನ್ವಯ ಮತ್ತು ಪರಿಶೀಲನಾ ಸಮಿತಿಗಳನ್ನು ರಚಿಸಲಾಗಿದೆ. ಗ್ರಾಮ ಪಂಚಾಯಿತಿ, ಮಟ್ಟದಲ್ಲಿ ಮಹಿಳೆಯರ ಮತ್ತು ಮಕ್ಕಳ ಹಕ್ಕುಗಳ ರಕ್ಷಣೆಯ ಕಾವಲು ಸಮಿತಿ ರಚನೆ ಮಾಡಲಾಗಿದೆ.
- ಬಾಲ್ಯವಿವಾಹ ನಿಷೇಧ ಕುರಿತು ಇಲಾಖಾಧಿಕಾರಿಗಳಿಗೆ ಹಾಗೂ ಸ್ವಯಂ-ಸೇವಾ ಸಂಸ್ಥೆಗಳ ಪ್ರತಿನಿಧಿಗಳಿಗೆ ವಿಭಾಗೀಯ ಮಟ್ಟದಲ್ಲಿ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿದೆ.
- ಬಾಲ್ಯವಿವಾಹ ನಿಷೇಧ ಮತ್ತು ಮಹಿಳೆಯರ ಮತ್ತು ಮಕ್ಕಳ ಅನೈತಿಕ ಸಾಗಾಣಿಕೆ ತಡೆಗಟ್ಟಲು ರಚಿಸಿರುವ ಗ್ರಾಮ ಪಂಚಾಯತ್ ಮಟ್ಟದ ಮಹಿಳೆಯರು ಮತ್ತು ಮಕ್ಕಳ ರಕ್ಷಣೆಯ ಕಾವಲು ಸಮಿತಿ ಸದಸ್ಯರಿಗೆ ಅರಿವು ಮೂಡಿಸಲು ದಿನಾಂಕ:23-01-2020, 24-01-2020, 31-01-2020 ಮತ್ತು 01-02-2020 ರಂದು ಉಪಗ್ರಹ ಆಧಾರಿತ ಕಾರ್ಯಕ್ರಮ ನಡೆಸಲಾಗಿದೆ.

564

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮ ನಿರ್ದೇಶನ ಹೊಂದಿದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:564ಕ್ಕೆ ಅನುಬಂಧ-3**

ಇತ್ತೀಚಿನ ಕೊರೋನ ಸೋಂಕು ಪಿಡುಗುವಿನಿಂದ ಬಾಲ್ಯವಿವಾಹಗಳಲ್ಲಿ ಗಣನೀಯ ಏರಿಕೆ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;ಬಂದಿದ್ದಲ್ಲಿ, ಈ ಬಾಲ್ಯವಿವಾಹಗಳನ್ನು ತಡೆಗಟ್ಟಲು ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು;

- 2020-21ನೇ ಸಾಲಿನಲ್ಲಿ ಕೋವಿಡ್-19 ಸಮಯದ ಲಾಕ್ ಡೌನ್ ಅವಧಿಯಲ್ಲಿ ಬಾಲ್ಯವಿವಾಹ ಪ್ರಕರಣಗಳು ಹೆಚ್ಚಾಗಿ ಕಂಡು ಬಂದಿದ್ದು, ಬಾಲ್ಯವಿವಾಹವನ್ನು ತಡೆಯಲು ಜಿಲ್ಲಾ ಮಟ್ಟದ ಬಾಲ್ಯವಿವಾಹ ನಿಷೇಧಾಧಿಕಾರಿಗಳಿಗೆ ದಿನಾಂಕ: 17-10-2020ರಂದು ವಿಡಿಯೋ ಸಂವಾದ ಕಾರ್ಯಕ್ರಮವನ್ನು ಏರ್ಪಡಿಸಿ ಸೂಕ್ತ ಸಲಹೆಗಳನ್ನು ನೀಡಲಾಗಿದೆ.
- 2020-21ನೇ ಸಾಲಿನಲ್ಲಿ ಕೋವಿಡ್-19 ಸಮಯದ ಈವರೆಗೆ 1918 ಬಾಲ್ಯವಿವಾಹಗಳನ್ನು ತಡೆಗಟ್ಟಲಾಗಿದೆ.
- ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ 30 ಜಿಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಜಿಲ್ಲಾ ಪಂಚಾಯತ್ ಹಾಗೂ ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗಳಿಗೆ ಬಾಲ್ಯವಿವಾಹ ನಿಷೇಧ ಕಾಯ್ದೆಯ ಅನುಷ್ಠಾನದ ಬಗ್ಗೆ ವಿಡಿಯೋ ಸಂವಾದ ಕಾರ್ಯಕ್ರಮವನ್ನು ಪ್ರತಿ ತಿಂಗಳು ನಡೆಸಲಾಗುತ್ತಿದೆ.
- ಬಾಲ್ಯವಿವಾಹ ನಿಷೇಧ (ಕರ್ನಾಟಕ ತುದ್ದುಪಡಿ) ಕಾಯ್ದೆ-2016ರ ಜಾರಿಗೊಳಿಸುವಿಕೆಯ ಕುರಿತು "ಕ್ರಮಬದ್ಧ ಕಾರ್ಯವಿಧಾನ" (ಎಸ್ .ಓ.ಪಿ) ಪುಸ್ತಕವನ್ನು ಮುದ್ರಣಕ್ಕೆ ಕ್ರಮ ವಹಿಸಲಾಗಿದೆ.